

'ಎರಡು ಲಕ್ಷ ರೂಪಾಯಿಗೆ ಖರೀದಿ ಮಾಡಿದ್ದ ನಿನ್ನ ಗಂಡ ಹೇಗಿದ್ದಾನೆ?'

ತನ್ನ ಪತ್ನಿಗೆ ಅವಳ ತಂದೆ ಬರೆದಿದ್ದ ಪತ್ರದ ಒಕ್ಕಣೆ ಓದಿ ಪತಿ ಮಹಾಶಯನಿಗೆ ಕೆಂಡದಂಥಾ ಕೋಪ ಬಂದಿತ್ತು.

'ಹೀಗೇನೇ ಬರೆಯೋದು? ಅಳಿಯ ಅನ್ನೋ ಗೌರವಾನೇ ಇಲ್ಲ...'

ಪತ್ನಿ ನಿರುಮ್ಮಳಳಾಗಿ ನುಡಿದಳು.

'ಅಯ್ಯೋ ಸುಮ್ಮನಿರ್ರೀ, ಅದರಲ್ಲಿ ನಿಮಗೆ ಕೊಟ್ಟ ಬೈಕ್‌ನ ಲೆಕ್ಕ ಮರೆತುಬಿಟ್ಟಿದ್ದಾರೆ...'

★★★

ಮುದ್ದಾಗಿ ಬೆಳೆಸಿದ್ದ ಮಗಳಿಗೆ ಮದುವೆ ವಯಸ್ಸು. ಸುಬ್ಬಾಭಟ್ಟರು ಮಗಳಿಗೆ ಕೇಳಿದರು.

'ಮಗಳೇ, ನಿನ್ನ ಗಂಡನಾಗುವವ ಹೇಗಿರಬೇಕು?'

'ಅಪ್ಪಾ, ಹೇಗಿದ್ದರೂ ತೊಂದರೆಯಿಲ್ಲ. ಆದರೆ ಅವನ ಬಳಿ ಕಡಿಮೆಯೆಂದರೂ ನಾಲ್ಕು ಕಾರುಗಳಿರಬೇಕು.'

ಭಟ್ಟರು ಮಗಳ ಮಾತಿಗೆ ಎದುರಾಡಲಿಲ್ಲ.

ಅವಳ ಆಸೆಯಂತೆಯೇ ಅಳಿಯನನ್ನು ಹುಡುಕಿದರು.

ಗ್ಯಾರೇಜ್ ಮಾಲೀಕ ಗಜಾನನನನ್ನು!

★★★

ಗಂಡನ ಇಸ್ಪೀಟ್ ಹುಚ್ಚಿಗೆ ಬೇಸತ್ತಿದ್ದ ಪದ್ಮಾ ಆ ದಿನ ಚೆನ್ನಾಗಿ ಜಗಳ ಕಾದಿದ್ದಳು.

ಗಂಡನೂ ಜಪ್ಪಯ್ಯ ಅನ್ನಲಿಲ್ಲ.

'ಲೇ, ಸುಮ್ಮನೆ ಗಂಟಲು ಹರ್ಕೋಬೇಡಾ, ಮಹಾಭಾರತದಲ್ಲಿ ಪಾಂಡವರು ಕೂಡ ಜೂಜಾಡ್ತಿದ್ದರು ಗೊತ್ತಾ?'

ಪದ್ಮಾಳಿಗೆ ಪಿತ್ತ ನೆತ್ತಿಗೇರಿತು:

'ಹೌದಾ? ಅದೇ ಮಹಾಭಾರತದಲ್ಲಿ ದ್ರೌಪದಿಗೆ 5 ಜನ ಗಂಡಂದಿರಿದ್ದರು ಅನ್ನೋದೂ ನಿಮಗೆ ಗೊತ್ತಿರಲಿ!'

**(ಸಂ) ಕೆ.ಶ್ರೀನಿವಾಸ ರಾವ್**

ಗುಂಡ: : 'ತಾತ, ನಿನಗೆ ಚಕ್ಕುಲಿ ತಿನ್ನಲು ಆಗುತ್ತಾ?'

ತಾತ: ಇಲ್ಲ ಮರಿ, ಹಲ್ಲುಗಳಿಲ್ಲ.

ಗುಂಡ: ಹಾಗಾದರೆ, ಈ ಚಕ್ಕುಲಿ ಡಬ್ಬ ನೋಡಿಕೊಂಡಿರು, ನಾನು ಸ್ಕೂಲಿಂದ ಬಂದ್ಮೇಲೆ ತಿಂತೀನಿ!

★★★

ಗುಂಡ: 'ನಾನು ಮೊದಲನೇ ಹಾಡು ಹಾಡಿದ ತಕ್ಷಣ ಸಭೆಯಿಂದ ಯಾರೋ ಒಂದು ಚಪ್ಪಲಿ ಎಸೆದರು.'

ಪುಂಡ: ಅಯ್ಯೋ.... ಹಾಡೋದು ನಿಲ್ಲಿಸಿದ್ಯಾ ಆಗ?

ಗುಂಡ: ಒಂದೇ ಒಂದು ಚಪ್ಪಲಿಯಿಂದ ನಾನೇನು ಮಾಡ್ಲಿ... ಅದಕ್ಕೆ ಇನ್ನೊಂದು ಹಾಡು ಹೇಳಿದೆ!

**(ಸಂ) ಶ್ರುತಿ ಕೆ.ಎಸ್., ತುರುವೇಕೆರೆ**

ಚಿಂಟು: ಅಂಕಲ್ ಹತ್ತು ರೂ.ಗೆ ಫೋನ್ ರಿಚಾರ್ಜ್ ಮಾಡಿಕೊಡಿ.

ಅಂಗಡಿಯಾತ: ಏಳು ರೂಪಾಯಿ ಟಾಕ್‌ಟೈಮ್ ದೊರೆಯುವುದು.

ಚಿಂಟು: ಸರಿ ಅಂಕಲ್, ಉಳಿದ ಮೂರು ರೂಪಾಯಿಯ ಚಾಕಲೇಟ್ ಕೊಡಿ.

★★★

ಸಂತಾ ಸಿಂಗ್ ಬ್ಯಾಂಕಿನಲ್ಲಿ ಹಣ ಜಮೆ ಮಾಡಲು ಹೋಗಿ 1000 ರೂಪಾಯಿ ನೋಟನ್ನು ನೀಡಿದ.

'ಈ ನೋಟು ನಕಲಿ ಇದೆ' ಎಂದ ಬ್ಯಾಂಕಿನ ಕ್ಯಾಷಿಯರ್.'

'ನೋಟ್ ನಕಲಿ ಇದ್ದರೆ ನಿನಗೇನು ತೊಂದರೆ? ಹಣ ಜಮೆಯಾಗುವುದು ನನ್ನ ಖಾತೆಗೆ ತಾನೆ?' ಎಂದ ಸಂತಾಸಿಂಗ್.

★★★

ಪಿಂಕಿ ತನ್ನ ಗೆಳತಿಗೆ ಹೇಳಿದಳು: 'ಈ ಬಾರಿ ನಾನು ಪರೀಕ್ಷೆಯಲ್ಲಿ ಫೇಲ್ ಆದರೆ ನನ್ನ ಮದುವೆ ಮಾಡುತ್ತೇನೆಂದು ನನ್ನ ಪಪ್ಪಾ ಎಚ್ಚರಿಸಿದ್ದಾರೆ.'

'ಹಾಗಾದರೆ ಹೇಗೆ ಸಾಗಿದೆ ನಿನ್ನ ಪರೀಕ್ಷೆಯ ತಯಾರಿ?' ಗೆಳತಿ ಕೇಳಿದಳು.

'ಪರೀಕ್ಷೆ ತಯಾರಿಯೆಲ್ಲಿ ಬಂತು? ರಿಸೆಪ್ಷನ್ ಡ್ರೆಸ್ ಕೊಳ್ಳುವ ತಯಾರಿ ನಡೆಸಿದ್ದೇನೆ' ಪಿಂಕಿ ಹೇಳಿದಳು.

★★★

ಒಬ್ಬ ವ್ಯಕ್ತಿ ಮಾತನಾಡುತ್ತಿದ್ದು ಅನೇಕರು ಕೇಳುತ್ತಿದ್ದರೆ ಅದು ಶೋಕಸಭೆ! ಅನೇಕರು ಮಾತನಾಡುತ್ತಿದ್ದು ಯಾರೂ ಕೇಳದಿದ್ದರೆ ಅದು ಲೋಕಸಭೆ!

**(ಸಂ) ಮುರಲೀಧರ ಕುಲಕರ್ಣಿ, ಬೀದರ್**

ಪತಿ: 'ನೋಡ್, ಈ ನಾಯಿಯನ್ನು ಎಂದಿಗೂ ಪಳಗಿಸುವುದಕ್ಕೆ ನಿನ್ನಿಂದ ಆಗೋದಿಲ್ಲ.'

ಪತ್ನಿ: 'ಸುಮ್ನಿರಿ ಸಾಕು, ನೀವು ಮೊದ ಮೊದಲು ಹೀಗೇ ಇದ್ದಿರಿ!'

★★★



ಆಕೆ: 'ನೋಡೇ, ನನ್ನವರು ತುಂಬ ಕುಡುಕರು, ಜೂಜು ಕೋರರು.'

ಈಕೆ: 'ಛೇ! ಎಂಥ ಮಾತಾಡ್ತೀಯೆ? ಯಾರಾದರೂ ಹೀಗೆ ಗಂಡನ ಬಗ್ಗೆ ಹೇಳ್ತಾರೇನೆ, ನಾನು ಯಾವಾಗಲಾದರೂ ನನ್ನ ಗಂಡ ಸೋಮಾರಿ, ನಿಷ್ಪ್ರಯೋಜಕರು ಅಂತ ಹೇಳಿದ್ದೀನಾ!?'

**(ಸಂ) ಶಂಕರೇಗೌಡ ತುಂಬಕೆರೆ, ಮಂಡ್ಯ**